**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಕರ್ನಾಟಕ ವಿಧಾನ ಪರಿಷತ್ತು**

**ದಿನಾಂಕ: 05ನೇ ಫೆಬ್ರವರಿ, 2018**
**ಸೋಮವಾರ**

**ವಿಷಯಾನುಕ್ರಮಣಿಕೆ**

1. **ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ.**

2. **ಸಂತಾಪ ಸೂಚನೆಗಳು**

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ಡಿ.ಕರ್ಪೂರಮಠ, ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಮುಕ್ತಾರುನ್ನೀಸಾ ಬೇಗಂ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಬಿ.ಪಾಟೀಲ್ ಅವರುಗಳ ನಿಧನದ ಬಗ್ಗೆ.

– **ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**
– **ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**

3. **ಅಭಿನಂದನೆ**

**ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ಇವರಿಗೆ '*Ideal Chairman*' ಪ್ರಶಸ್ತಿ ಲಭಿಸಿರುವ ಬಗ್ಗೆ.**

<><><>

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 05ನೇ ಫೆಬ್ರವರಿ 2018**

ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿ (ಶ್ರೀ **ಡಿ.ಹೆಚ್.ಶಂಕರಮೂರ್ತಿ**) ಅವರು

ಪೀಠದಲ್ಲಿ ಉಪಸ್ಥಿತರಿದ್ದರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1. ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ

**ಕಾರ್ಯದರ್ಶಿ, ಕ.ವಿ.ಪ:-** ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಕನ್ನಡ, ಆಂಗ್ಲ ಮತ್ತು ಹಿಂದಿ ಪ್ರತಿಗಳನ್ನು ಲಗತ್ತಿಸಲಾಗಿದೆ)

## 2. ಸಂತಾಪ ಸೂಚನೆ

**ವಿಷಯ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ಡಿ.ಕರ್ಪೂರಮಠ, ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಮುಕ್ತಾರುನ್ನೀಸಾ ಬೇಗಂ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಬಿ.ಪಾಟೀಲ್, ಅವರುಗಳ ನಿಧನದ ಬಗ್ಗೆ.**

----

**ಸಭಾಪತಿಯವರು:-** ಹಿಂದಿನ ಬೆಳಗಾವಿಯ ಅಧಿವೇಶನವನ್ನು ಪೂರ್ಣಗೊಳಿಸಿದ ನಂತರ ಇವತ್ತಿನವರೆಗೆ ನಮ್ಮ ಸದನದ ಕೆಲವು ಮಾನ್ಯ ಸದಸ್ಯರು/ಗಣ್ಯರು ನಮ್ಮನ್ನಗಲಿದ್ದಾರೆ. ಅವರುಗಳ ನೆನಪುಗಳನ್ನು ಮಾಡಿಕೊಳ್ಳುತ್ತಾ, ಸಂತಾಪ ಸೂಚನೆ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

(ಪ್ರತಿ ಲಗತ್ತಿಸಲಾಗಿದೆ)

(2) 05.02.2018/12.40/ಎಸ್‌ಕೆ-ಕೆಎಸ್

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ಈ ಸಂತಾಪ ಸೂಚನೆಗೆ ನಾನು ಸಹಮತಿ ನೀಡುತ್ತಾ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್. ಡಿ ಕರ್ಪೂರಮಠ, ಶ್ರೀಮತಿ ಮುಕ್ತಾರುನ್ನೀಸಾ ಬೇಗಂ ಹಾಗೂ ಶ್ರೀ ಎ.ಬಿ. ಪಾಟೀಲ್, ಅವರುಗಳು ಬೆಳಗಾವಿ ಅಧಿವೇಶನದ ನಂತರ ನಿಧನರಾದುದ್ದು, ನಮ್ಮೆಗೆಲ್ಲರಿಗೂ ನೋವನ್ನು ತಂದಿದೆ. ವಿಧಾನ ಪರಿಷತ್ತಿನ ಸದಸ್ಯರ ಪರವಾಗಿ, ಮೃತರ ಕುಟುಂಬಕ್ಕೆ ಅವರ ನಿಧನವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಆ ಭಗವಂತನಲ್ಲಿ ಪ್ರಾರ್ಥನೆ ಮಾಡಿ, ನಾನು ಈ ತಮ್ಮ ಸೂಚನೆಗೆ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಏನೊಂದು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ. ನಾನು ಅದಕ್ಕೆ ಬೆಂಬಲವನ್ನು ಸೂಚಿಸುತ್ತಾ, ಶ್ರೀ ಎಸ್. ಡಿ. ಕರ್ಪೂರಮಠ, ಶ್ರೀಮತಿ ಮುಕ್ತಾರುನ್ನೀಸಾ ಬೇಗಂ ಹಾಗೂ ಶ್ರೀ ಎ.ಬಿ. ಪಾಟೀಲ್,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರುಗಳು ಮತ್ತು ಅವರ ಜೊತೆಗೆ ನಿನ್ನೆ ರೆಜೋರಿಯಾ ಗಡಿಯಲ್ಲಿ ಪಾಕಿಸ್ತಾನ ಮತ್ತು ಕ್ಷಿಪಣಿ ಶಲ್ ದಾಳಿಯಲ್ಲಿ ಹುತಾತ್ಮರಾದಂತಹ ನಮ್ಮ ಸೇನೆಯ ಕ್ಯಾಪ್ಟನ್ ಕಪಿಲ್ ಕುಂಡು, ಹವಿಲ್ದಾರ್ ರೋಷನ್ ಲಾಲ್, ರೈಫಲ್‌ಮ್ಯಾನ್ ರಾಮ್ ಅವತಾರ್, ರೈಫಲ್ ಮ್ಯಾನ್ ಶುಭಂ ಸಿಂಗ್ ಇವರುಗಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ವಿಶೇಷವಾಗಿ ಈ ಮೂರು ಜನರ ಬಗ್ಗೆ ವಿಧಾನ ಪರಿಷತ್ತಿನ ಸದಸ್ಯರಿಗೆ ಹಾಗೂ ವೈಯಕ್ತಿಕ ನನಗೂ ಸಹ ಪರಿಚಯ ಇಲ್ಲ. ಆದರೆ ಅಗಲಿರುವಂತಹ ಗಣ್ಯರು ಯಾವ್ಯಾವ ಪಕ್ಷಗಳಲ್ಲಿ ಇದ್ದರು ಎನ್ನುವುದಕ್ಕಿಂತಲೂ, ವೃತ್ತಿಯಲ್ಲಿ ಸಮಾಜ ಸೇವೆ, ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ, ಶಿಕ್ಷಣ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು, ಇದೆಲ್ಲವೂ ಕೂಡ ಯುವಕರಿಗೆ, ಮಹಿಳೆಯರಿಗೆ ಅವರು ಮಾಡಿದಂತಹ ಸೇವೆ ಮತ್ತು ಸಹಕಾರಿ ಕ್ಷೇತ್ರದಲ್ಲಿ ಮಾಡಿದಂತಹ ಸೇವೆ ಇವುಗಳನ್ನೆಲ್ಲಾ ಗಮನಿಸಿದಾಗ ನಿಜಕ್ಕೂ ಕೂಡ ಇಂತಹವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾದುದ್ದು ನಮ್ಮ ಕರ್ತವ್ಯ. ಅವರ ಕುಟುಂಬಕ್ಕೆ, ದುಃಖವನ್ನು ಭರಿಸುವಂತಹ ಶಕ್ತಿಯನ್ನು ಪರಮಾತ್ಮ ಕೊಡಲಿ. ನಾವುಗಳು ಸಹ ಇವರು ಏನೇನು ಸೇವೆ ಮಾಡಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಂಡು ಅದೇ ರೀತಿ ಸಮಾಜ ಸೇವೆ ಮಾಡುವ ದಿಕ್ಕಿನಲ್ಲಿ ಪ್ರಯತ್ನ ನಡೆಸಿದರೆ, ಆಗ ನಿಜಕ್ಕೂ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ನಾನು ಭಾವಿಸುತ್ತೇನೆ. ಮತ್ತೊಮ್ಮೆ ಮೃತರ ಶಾಂತಿ ಸಿಗಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನೀವು ಕಳೆದ ಬರಿ ಸಂತಾಪ ಸೂಚನೆ ಸಂದರ್ಭದಲ್ಲಿ ಸಲ ನೀವು ಶ್ರೀ ಖಮರುಲ್ಲಾ ಇಸ್ಲಾಂಗೆ ಅಲ್ಪಸಂಖ್ಯಾತ ನಾಯಕರು ಎಂದು ಹೇಳಲಾಗಿತ್ತು. ಈಗಲೂ ಸಹ ಶ್ರೀಮತಿ ಮುಕ್ತಾರುನ್ನೀಸಾ ಬೇಗಂಗೆ ಅಲ್ಪಸಂಖ್ಯಾತ ನಾಯಕರು ಎಂದು ಏಕೆ ಜಾತಿಗೆ ಒಂದು ಪಟ್ಟವನ್ನು ಕಟ್ಟುತ್ತೀರಿ? ಅವರು 'ಸಾಮಾಜಿಕ ನಾಯಕರು' ಎಂದು ಹೇಳಿದರೆ ಸಾಕು. ಏಕೆಂದರೆ ನಾವು ಸತ್ತರೂ ಸಹ ಈ ರೀತಿಯ ಭೇದ-ಭಾವ ಆಗಬಾರದೆಂದು ಅಡ್ವಾನ್ಸ್ ಆಗಿ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಸರಿ ತಾವು ಹೇಳಿದ್ದನ್ನು ಒಪ್ಪುತ್ತೇನೆ. ನಾವು ಬದಲಾವಣೆ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ** ಇಬ್ರಾಹಿಂರವರ ವಿಚಾರದಲ್ಲಿ ಮೃತ ಪಟ್ಟ ಅಂತಹ ಸಂದರ್ಭ ಬಂದಾಗ ಖಂಡಿತ 'ಅಲ್ಪಸಂಖ್ಯಾತ ನಾಯಕರು' ಎಂದು ಹೇಳುವಂತಹ ಅವಶ್ಯಕತೆ ಬರಲಿಕ್ಕಿಲ್ಲ. ಎರಡನೆಯದಾಗಿ, ನೀವು ಇಲ್ಲಿರುವಂತಹ ಸಂದರ್ಭದಲ್ಲಿ ಖಂಡಿತ ನಾನು ಹೇಳುತ್ತೇನೆ. ನಾವು ಯಾರೂ ಕೂಡ ಆ ಒಂದು ಶೋಕವನ್ನು ಭರಿಸುವಂತಹ ಸ್ಥಿತಿ ದಯವಿಟ್ಟು ಆದಷ್ಟು ಬೇಗ ತರಬೇಡಿ ಎಂಬುದು ನನ್ನ ಪ್ರಾರ್ಥನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಸಾವಿನಲ್ಲಿ ಸಮಾನತೆಯನ್ನು ತೋರಿಸಿ ಎಂದು ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**೩. ಅಭಿನಂದನೆ**

**ವಿಷಯಃ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿ ಇವರಿಗೆ**
**'*Ideal Chairman'* ಪ್ರಶಸ್ತಿ ಲಭಿಸಿರುವ ಬಗ್ಗೆ.**

**ಶ್ರೀಮತಿ ತಾರಾಅನೂರಾಧ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಸದನವನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಒಂದು ಒಳ್ಳೆಯ ವಿಷಯನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಭಾರತ ದೇಶದಲ್ಲೆ ಪ್ರಪ್ರಥಮ ಬಾರಿಗೆ ನಮ್ಮ ಹಿರಿಯ ಸಭಾಪತಿಯವರಿಗೆ *'Ideal Chairman'* ಎಂಬ ಪ್ರಶಸ್ತಿಯನ್ನು ಇತ್ತೀಚೆಗೆ ಪುಣೆಯಲ್ಲಿ *"Bharatiya Chhatra Sansad"* ಎಂಬುವವರು ಕೊಟ್ಟಿದ್ದಾರೆ. ಇದು ನಮಗೆಲ್ಲರಿಗೂ ಹೆಮ್ಮೆ ಮತ್ತು ಖುಷಿ ತರುವಂತಹ ವಿಚಾರವಾಗಿದೆ. ನಮ್ಮೆಲ್ಲರ ಪರವಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾ ಅನೂರಾಧರವರ ಹೇಳಿರುವಂತಹ ಮಾತುಗಳನ್ನು ಅನುಮೋದನೆ ಮಾಡುತ್ತಾ, ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಉಭಯ ಸದನಗಳನ್ನುದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಂತಹ ಭಾಷಣದ ಹಿಂದಿ ಭಾಷೆಯ ಪ್ರತಿಯನ್ನು ಒದಗಿಸಿದ್ದೀರಿ. ಮೊದಲನೆಯದಾಗಿ, ಅವರು ಹಿಂದಿಯಲ್ಲಿ ಮಾತಾಡಿದ್ದೇ ಮೊದಲ ತಪ್ಪು. ಇದಕ್ಕಾಗಿ ನಾನು ಖಂಡನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಪ್ರತಿಗಳನ್ನು ಕೊಟ್ಟಿರುವುದನ್ನು ಖಂಡಿತವಾಗಿ ಸ್ವೀಕಾರ ಮಾಡುತ್ತೇನೆ. ತಾವು ಹಿಂದಿಯಲ್ಲಿ circulate ಮಾಡಿದ್ದೀರಾ. ಇದು ತಪ್ಪು. ಇದು precedent ಆಗಬಾರದು.

**ಸಭಾಪತಿಯವರು:-**ಹಿಂದಿ ಭಾಷೆಯ ಪ್ರತಿಯನ್ನು circulate ಮಾಡಿಲ್ಲ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ದಯವಿಟ್ಟು ಅದನ್ನು ಕೊಡಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇಂಗ್ಲೀಷ್ ಭಾಷೆಯ ಪ್ರತಿಯನ್ನು circulate ಮಾಡಿರುವುದನ್ನು ಅವರು ಒಪ್ಪುತ್ತಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಈಶ್ವರಪ್ಪನವರೇ, ಇದು ನನ್ನ ಅಭಿಪ್ರಾಯ.

**ಶ್ರೀ ಕೆ.ಎಸ್. ಈಶ್ವರಪ್ಪ:- ಆದರೆ,** ಹಿಂದಿ ಭಾಷೆಯ ಪ್ರತಿಯನ್ನು circulate ಮಾಡುವುದನ್ನು ಒಪ್ಪುವುದಿಲ್ಲವಂತೆ. ಇದು ಯಾವ ನ್ಯಾಯ.

**(ಗೊಂದಲ)**

**ಶ್ರೀ ರಮೇಶ್ ಬಾಬು:-** ಮಾನ್ಯ ಈಶ್ವರಪ್ಪನವರೇ ಇದು ನನ್ನ ಅಭಿಪ್ರಾಯ. ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ.

**(ಗೊಂದಲ)**

**ಸಭಾಪತಿಯವರು:-** ಈಗ ಸಾಕು. ಕನ್ನಡ ಮತ್ತು ಇಂಗ್ಲೀಷ್ ಎರಡೂ ಪ್ರತಿಗಳನ್ನು ಕೊಡುವುದಕ್ಕೆ ವ್ಯವಸ್ಥೆಯಾಗಿದೆ.

**(003)05.02.2018/12.50/ಟಿಸಿಹೆಚ್-ಜಿ.ಆರ್**

**ಸಭಾಪತಿಯವರು (ಮುಂದು)**

ಘನತೆವೆತ್ತ ರಾಜ್ಯಪಾಲರು ರಾಜ್ಯ ವಿಧಾನ ಮಂಡಲವನ್ನು ಉದ್ದೇಶಿಸಿ ಮಾಡಿದ ಭಾಷಣವು ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಮುದ್ರಣವಾಗಿರುತ್ತದೆ. ಮೇಲ್ಭಾಗದಲ್ಲಿ ಕುಳಿತಿದ್ದ ನನಗೂ ಸಹ ಕನ್ನಡ ಮತ್ತು ಇಂಗ್ಲೀಷ್ ಪ್ರತಿಯನ್ನು ಕೊಟ್ಟಿದ್ದರು. ಅದು ಮಾನ್ಯ ಸದಸ್ಯರುಗಳಿಗೆ ಸಿಕ್ಕಿಲ್ಲದಿದ್ದರೆ ಕಳುಹಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ನಮ್ಮ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಮಾನ್ಯ ಆರ್.ವಿ.ದೇಶಪಾಂಡೆಯವರು ತಮಗೆಲ್ಲಾ ಒಂದು ಪತ್ರವನ್ನು ಕಳುಹಿಸಿಕೊಟ್ಟಿರಬಹುದು, ಅದು ಕೆಲವು ಸದಸ್ಯರಿಗೆ ತಲುಪಿರಬಹುದು, ಮತ್ತೆ ಕೆಲವು ಸದಸ್ಯರಿಗೆ ತಲುಪಿಲ್ಲ. ಅವರ ಮೊಮ್ಮಗನ ಉಪನಯನ ಇರುವ ಪ್ರಯುಕ್ತ, ಇಂದು ಮಧ್ಯಾಹ್ನ ಸದನ ಮುಂದೂಡಿದ ನಂತರ, ಅವರು ತಮ್ಮನ್ನೆಲ್ಲಾ ಊಟಕ್ಕೆ ಕರೆದಿದ್ದಾರೆ. ಅವರಿಗೆ ತಮಗೆಲ್ಲಾ ಹೇಳುವುದಕ್ಕೆ ಸಮಯ ಇರಲಿಲ್ಲ. ಅವರ ಪರವಾಗಿ ತಮಗೆಲ್ಲಾ ತಿಳಿಸುವುದಕ್ಕೆ ಪತ್ರದ ಮುಖೇನ ತಿಳಿಸಿದ್ದಾರೆ. ಆದ್ದರಿಂದ ತಾವುಗಳು ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಸಮಾರಂಭದಲ್ಲಿ ಭಾಗವಹಿಸಿ ಎಂದು ಕೇಳಿಕೊಳ್ಳುತ್ತಾ, ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಮಧ್ಯಾಹ್ನ 12 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 06ನೇ ಫೆಬ್ರವರಿ ಮಾಹೆ 2018ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”